## ನಿಮ್ಮೊಡನೆ

# ಹೆಚ್ಚು ಪರಿಹಾರ ಕೊಡಿ

**ರಸ್ತೆ ಅಪಘಾತಗಳಿಂದ ನೊಂದವರ ಪ್ರಕರಣಗಳ ಇತ್ಯರ್ಥದ ಸಂದರ್ಭದಲ್ಲಿ ಉದಾರ ದೃಷ್ಟಿಕೋನ ಹೊಂದಿರಬೇಕು ಎಂದು ಸರ್ವೋಚ್ಚ ನ್ಯಾಯಾಲಯ ನೀಡಿರುವ ನಿರ್ದೇಶನ ನೊಂದವರ ಬದುಕನ್ನು ಒಂದಿಷ್ಟಾದರೂ ಸಹನೀಯವಾಗಿಸಬಲ್ಲುದು.**

ರಸ್ತೆ ಅಪಘಾತಗಳು ದಿನನಿತ್ಯದ ವಿದ್ಯಮಾನಗಳಾಗಿಬಿಟ್ಟಿವೆ. ಕಳೆದ ನಾಲ್ಕು ವರ್ಷಗಳಲ್ಲಿ ದೇಶದಾದ್ಯಂತ 5 ಲಕ್ಷ ಜನ ರಸ್ತೆ ಅಪಘಾತಗಳಲ್ಲಿ ಅಸುನೀಗಿದ್ದು, 22 ಲಕ್ಷ ಮಂದಿ ಗಾಯಗೊಂಡಿದ್ದಾರೆ. ಇಷ್ಟೊಂದು ಜನರ ಸಾವುನೋವಿಗೆ ಕಾರಣವಾದ ಹಾಗೂ ಈಗಲೂ ಕಾರಣವಾಗುತ್ತಿರುವ ರಸ್ತೆ ಅಪಘಾತಗಳ ಬಗ್ಗೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದೆ. ರಸ್ತೆ ಸುರಕ್ಷತೆಯ ಬಗ್ಗೆ ಗಮನ ಹರಿಸಬೇಕಾದ ತುರ್ತಿನತ್ತ ಇದು ಬೆರಳು ಮಾಡುತ್ತದೆ.

ನಮ್ಮ ರಾಜ್ಯದಲ್ಲೂ, ಬೆಂಗಳೂರಿನಂತಹ ಮಹಾನಗರಗಳಲ್ಲಿ ದ್ವಿಚಕ್ರವಾಹನ ಚಾಲನೆ ಅಷ್ಟೇನೂ ಸುರಕ್ಷಿತವಲ್ಲ ಎಂಬಂತಹ ಅಭದ್ರತೆಯನ್ನು ಹುಟ್ಟಿಹಾಕುವ ಪರಿಸ್ಥಿತಿ ಇದೆ. ಪತ್ರಿಕೆಗಳ ಅಪರಾಧ ವರದಿಗಳಲ್ಲಿ ದಿನನಿತ್ಯ ಎಂಬಂತೆ ರಸ್ತೆ ಅಪಘಾತದ ವರದಿಗಳು ಇರುತ್ತವೆ. ಆಗ್ನೇಯ ಏಷ್ಯಾ ರಾಷ್ಟ್ರಗಳ ಪೈಕಿ, ಪ್ರತಿ ವರ್ಷ ಅತ್ಯಂತ ಹೆಚ್ಚು ರಸ್ತೆ ಅಪಘಾತಗಳು ವರದಿಯಾಗುವ ರಾಷ್ಟ್ರ ಎಂಬಂತಹ ಕುಖ್ಯಾತಿಯೂ ಭಾರತಕ್ಕಿದೆ. ಈ ಮಟ್ಟಿನ ರಸ್ತೆ ಅಪಘಾತಗಳ ಏರಿಕೆಗೆ ಯಾರನ್ನು ಹೊಣೆ ಮಾಡಬೇಕು? ಎಂಬುದು ಪ್ರಶ್ನೆ.

ಅತಿ ವೇಗದ, ಅಜಾಗರೂಕತೆಯ ಚಾಲನೆ, ರಸ್ತೆಯಲ್ಲಿ ಪಾಲಿಸಬೇಕಾದ ಶಿಸ್ತಿನ ಕೊರತೆ ಅಪಘಾತಗಳಿಗೆ ಮುಖ್ಯ ಕಾರಣ. ನಗರ ಬದುಕಿನ ಅವಸರ, ಆತಂಕಗಳು, ಮದ್ಯಪಾನ ಮಾಡಿ ಚಾಲನೆ ಮಾಡುವುದು ಅನೇಕ ಅಪಘಾತಗಳಿಗೆ ಕಾರಣವಾಗುತ್ತಿವೆ. ಹಾಗೆಯೇ ವಾಹನ ಚಾಲನೆ ಮಾಡುತ್ತಾ ನಡೆಸುವ ಮೊಬೈಲ್ ಸಂಭಾಷಣೆಗಳು ರಸ್ತೆ ಅಪಘಾತಗಳಿಗೆ ಹೊಸ ನಿಮಿತ್ತಗಳಾಗುತ್ತಿವೆ. ಜೊತೆಗೆ ಸಂಚಾರ ದಟ್ಟಣೆಯ ರಸ್ತೆಗಳಲ್ಲಿ ಚಾಲನೆಯ ಒತ್ತಡಗಳು ಸೃಷ್ಟಿಸುವ ಹಿಂಸಾತ್ಮಕ ಪ್ರವೃತ್ತಿ ಮತ್ತು ಘಟನೆಗಳೂ (ರೋಡ್ ರೇಜ್)ರಸ್ತೆಗಳಲ್ಲಿ ಸಾವು, ನೋವುಗಳಿಗೆ ಕಾರಣವಾಗುತ್ತಿವೆ.

ಹೆಚ್ಚುತ್ತಿರುವ ರಸ್ತೆ ಅಪಘಾತಗಳು ಹಾಗೂ ಅವುಗಳಿಗೆ ನೀಡುವ ಪರಿಹಾರ ಇತ್ಯರ್ಥವಾಗದೆ ಭಾರಿ ಸಂಖ್ಯೆಯಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಬಗ್ಗೆ ಸುಪ್ರೀಂ ಕೋರ್ಟ್ ಆಗಾಗ್ಗೆ ಆತಂಕ ವ್ಯಕ್ತಪಡಿಸುತ್ತಲೇ ಬಂದಿದೆ. ಈ ನಿಟ್ಟಿನಲ್ಲಿ, ಅಪಘಾತಗಳಲ್ಲಿ ನೊಂದವರಿಗೆ ಸೂಕ್ತ ಪರಿಹಾರಗಳನ್ನು ಒದಗಿಸಿ ಕೊಡುವಲ್ಲಿ ಹೆಚ್ಚು ಆಸಕ್ತಿಯಿಂದ ಸಕ್ರಿಯವಾಗಿ ಕಾರ್ಯ ನಿರ್ವಹಿಸಬೇಕೆಂದು ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಪಂಚಾಯಿತಿಗಳಿಗೆ ಸುಪ್ರೀಂಕೋರ್ಟ್ ಈಗ ಮತ್ತೆ ನಿರ್ದೇಶನ ನೀಡಿದೆ.

ರಸ್ತೆ ಅಪಘಾತಗಳಲ್ಲಿ ನೊಂದವರು ಹಾಗೂ ಅವರ ಅವಲಂಬಿತರು ವಿಮಾ ಕಂಪೆನಿಗಳಿಂದ ಅನುಭವಿಸುವ ಕಷ್ಟಗಳನ್ನೂ ಸುಪ್ರೀಂಕೋರ್ಟ್ ಇದೇ ಸಂದರ್ಭದಲ್ಲಿ ಎತ್ತಿ ಹೇಳಿದೆ. ಅಪಘಾತಗಳಿಂದ ಬದುಕುಳಿದವರು ಅಥವಾ ಅಂಗವೈಕಲ್ಯಗಳಿಗೆ ಗುರಿಯಾದವರ ನೋವನ್ನು ಹಣದಿಂದ ಅಳೆಯುವುದು ಕಷ್ಟ. ಆದರೆ ಅನೇಕ ಸಂದರ್ಭಗಳಲ್ಲಿ ತಮ್ಮ ಹೊಣೆ ಕಡಿಮೆ ಮಾಡಿಕೊಳ್ಳುವುದಕ್ಕಾಗಿ ಕಾನೂನು ಕಲಾಪಗಳನ್ನು ವಿಳಂಬ ಮಾಡುವ ವಿಮಾ ಕಂಪೆನಿಗಳು ಪರಿಹಾರ ಮೊತ್ತವನ್ನು ಅರ್ಥಹೀನವಾಗಿಸುವ ಸಂದರ್ಭಗಳೂ ಇವೆ ಎಂಬುದನ್ನು ಸುಪ್ರೀಂಕೋರ್ಟ್ ಟೀಕಿಸಿದೆ.

ಈ ಹಿನ್ನೆಲೆಯಲ್ಲಿಯೇ, ಜಬಲ್‌ಪುರದಲ್ಲಿ ರಸ್ತೆ ಅಪಘಾತದಲ್ಲಿ ಕಾಲು ಕಳೆದುಕೊಂಡಿದ್ದ ಲಾರಿ ಕ್ಲೀನರ್ 24 ವರ್ಷದ ಗೋವಿಂದ್ ಯಾದವ್ ಅವರಿಗೆ ನೀಡಲಾಗಿದ್ದ ಪರಿಹಾರದ ಮೊತ್ತ ರೂ 2.56 ಲಕ್ಷವನ್ನು ರೂ. 9.53 ಲಕ್ಷಕ್ಕೆ ಏರಿಸಿ ಸುಪ್ರೀಂಕೋರ್ಟ್ ಆದೇಶ ನೀಡಿದೆ. ಜೊತೆಗೆ ಅಪಘಾತಗಳಿಂದ ನೊಂದವರ ಪ್ರಕರಣಗಳ ಇತ್ಯರ್ಥದ ಸಂದರ್ಭದಲ್ಲಿ ಉದಾರ ದೃಷ್ಟಿಕೋನ ಹೊಂದಿರಬೇಕು ಎಂದೂ ಅಧೀನ ನ್ಯಾಯಾಲಯಗಳಿಗೆ ಕಿವಿಮಾತು ಹೇಳಿದೆ. ಈ ಪ್ರಕರಣದಲ್ಲಿ ಕಾಲು ಕಳೆದುಕೊಂಡಿರುವ ವ್ಯಕ್ತಿ ಇನ್ನೂ ಸುಮಾರು 50 ಅಥವಾ ಅದಕ್ಕೂ ಹೆಚ್ಚು ಕಾಲ ಜೀವಿಸುವ ಸಂದರ್ಭವಿದೆ. ಕಾಲು ಕಳೆದುಕೊಂಡಿರುವುದರಿಂದ ಆತನ ವಿವಾಹ ಸಾಧ್ಯತೆಗಳೂ ಕ್ಷೀಣಿಸಿವೆ. ಮುಂದಿನ ಜೀವನದುದ್ದಕ್ಕೂ ಆತನ ಸಹಜ ಬದುಕಿನ ಸಂತಸವನ್ನು ಕಿತ್ತುಕೊಂಡಿರುವ ಈ ಅಪಘಾತಕ್ಕೆ ಪೂರ್ಣ ಪ್ರಮಾಣದಲ್ಲಿ ಪರಿಹಾರ ಒದಗಿಸುವುದು ಕಷ್ಟ. ಹೀಗಾಗಿಯೇ ಭವಿಷ್ಯದ ಆತನ ಚಿಕಿತ್ಸೆಯ ಕೋಟಲೆಗಳಿಗೂ ಪರಿಹಾರ ಒದಗಿಸುವಂತಿರಬೇಕು ಎಂದು ಸುಪ್ರೀಂಕೋರ್ಟ್ ಅಭಿಪ್ರಾಯಪಟ್ಟಿದೆ.

ರಸ್ತೆ ಸುರಕ್ಷತೆ ನಮ್ಮ ಮೊದಲ ಆದ್ಯತೆ ಆಗಬೇಕು. ಈ ನಿಟ್ಟಿನಲ್ಲಿ ಸರ್ಕಾರ, ಸಮಾಜ ಕೈಜೋಡಿಸಬೇಕು. ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ರಸ್ತೆ ಸ್ಥಿತಿಗತಿಗಳನ್ನು ಸುಧಾರಿಸುವುದರ ಜೊತೆಗೆ ಅಪಘಾತಕ್ಕೆ ಕಾರಣರಾದವರಿಗೆ ಸೂಕ್ತ ಶಿಕ್ಷೆಯೂ ಆಗಬೇಕು.ಅಪಘಾತಗಳಿಂದ ನೊಂದವರಿಗೆ ಪರಿಹಾರವೂ ಸೂಕ್ತರೀತಿಯಲ್ಲೇ ಇರಬೇಕೆಂಬ ಸರ್ವೋಚ್ಚ ನ್ಯಾಯಾಲಯದ ಈ ನಿರ್ದೇಶನ ನೊಂದವರ ಬದುಕನ್ನು ಒಂದಿಷ್ಟಾದರೂ ಸಹನೀಯವಾಗಿಸಬಲ್ಲುದು.

■ **ಸಿ. ಜಿ. ಮಂಜುಳಾ**

